**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ 05-08-2021**

**ಪಾಟೀ ಸವಾಲು - ಶ್ರೀ. ಪಿ.ಬಿ.ಎನ್., ವಕೀಲರಿಂದ**

2) ನಾನು ರೆಡ್ಡಿಹಳ್ಳಿಯಲ್ಲಿ ವಾಸ ಮಾಡುತ್ತೇನೆ. ವಾದಿಗಳು ಈ ದಾವೆಯನ್ನು ಯಾವ ಯಾವ ಊರಿನಲ್ಲಿರುವ ಜಮೀನುಗಳ ಮೇಲೆ ಹಾಕಿದ್ದಾರೆ ಎಂದರೆ ಬಾಲದಿಮ್ಮನಹಳ್ಳಿ ಗ್ರಾಮದಲ್ಲಿರುವ ಒಂದು ಜಮೀನಿನ ಬಗ್ಗೆ ಮಾತ್ರ ದಾವೆ ಹಾಕಿದ್ದಾರೆ. ದಾವಾ ಜಮೀನಿನ ಸರ್ವೆ ನಂ.26 ಇರುತ್ತದೆ. ಅದರ ವಿಸ್ತೀರ್ಣ ಒಂದೂಮುಕ್ಕಾಲು ಎಕರೆಯಿಂದ ಎರಡು ಎಕರೆ ಇರಬಹುದು. ಅದರ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ವೆಂಕಟರಾಮಯ್ಯನವರ ಜಮೀನು, ಪಶ್ಚಿಮಕ್ಕೆ ಆಂಜಿನಪ್ಪನ ಜಮೀನು ಅದು ಭೂಸ್ವಾಧೀನವಾಗಿದೆ ಮತ್ತು ರಸ್ತೆ ಕೂಡ ಆಗಿದೆ. ಉತ್ತರಕ್ಕೆ ಸರ್ಕಾರಿ ಕಾಲುವೆ ಮತ್ತು ದಕ್ಷಿಣಕ್ಕೆ ಗ್ರಾಮಠಾಣಾ ಜಮೀನು ಇರುತ್ತವೆ. ರೆಡ್ಡಿಹಳ್ಳಿಯಿಂದ ಬಾಲದಿಮ್ಮನಹಳ್ಳಿ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿದೆ. ವಾದಿಗಳು ನನಗೆ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು ಅಂದರೆ ಅಣ್ಣ-ತಮ್ಮಂದಿರಾಗಬೇಕು. ನಾನು ನನ್ನ ಪ್ರಮಾಣ ಪತ್ರದಲ್ಲಿ ವಾದಿಗಳು ನನ್ನ ಸಂಬಂಧಿಕರೆಂದು ಹೇಳಿಲ್ಲವೆಂದರೆ ಸರಿ.

3) ದಾವಾ ಸ್ವತ್ತಿನಲ್ಲಿ ಏನೇನು ಬೆಳೆ ಬೆಳೆದಿದ್ದಾರೆ ಎಂದರೆ ರಾಗಿ ಮಾತ್ರ ಬೆಳೆದಿದ್ದಾರೆ. ರಾಗಿ ಬೆಳೆಯನ್ನು 1ನೇ ವಾದಿ ರಾಜಣ್ಣ ಬೆಳೆದಿದ್ದಾರೆ. ರಾಜಣ್ಣ ರಾಗಿ ಬೆಳೆ ಬೆಳೆಯದೇ ಇದ್ದರೂ ನಾನು ಅವರ ಪರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ದಾವಾ ಸ್ವತ್ತನ್ನು ಕೊಂಡುಕೊಂಡ ಬಗ್ಗೆ ನಿಮಗೆ ಗೊತ್ತಿದೆಯೇ? ಎಂದರೆ ನಮಗೆ ಅವರು ಕೊಂಡುಕೊಂಡ ಬಗ್ಗೆ ಎಂಟು ವರ್ಷಗಳ ಹಿಂದೆ

ಗೊತ್ತಾಯಿತು. ದಾವಾ ಸ್ವತ್ತಿನ ಖಾತೆ ಮತ್ತು ಕಂದಾಯ ದಾಖಲೆಗಳು 5ನೇ ಪ್ರತಿವಾದಿ ಹೆಸರಿನಲ್ಲಿ ನಮೂದಾಗಿವೆ ಎಂದರೆ ಇಲ್ಲ, ರಾಜಣ್ಣನ ಹೆಸರಿನಲ್ಲೇ ಇರುತ್ತವೆ. 5ನೇ ಪ್ರತಿವಾದಿಯೇ ದಾವಾಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಕೋರ್ಟಿಗೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲಾ.

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**